ಅಸಲು ದಾವೆ ನಂಃ 327/2022 ಪಿ.ಡಬ್ಲ್ಯೂಃ1- ವೀರಭದ್ರಯ್ಯ ಹಿರೇಮಠ

ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 09-11-2022 ರಂದು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಬಿ.ಎ.ಸಜ್ಜನರ ವಕೀಲರಿಂದಃ**

ನಾನು ಈ ದಾವೆಯಲ್ಲಿ ವಾದಿ ಇರುತ್ತೇನೆ. ಈ ದಿನ ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮುಖಾಂತರ ಸಲ್ಲಿಸಿರುತ್ತೇನೆ. ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲಾ ವಿಷಯಗಳು ನನಗೆ ತಿಳಿದ ಮಾಹಿತಿಯಂತೆ ಸತ್ಯವಾಗಿರುತ್ತವೆ. ಪ್ರಮಾಣ ಪತ್ರವನ್ನು ನಾನು ನೀಡಿದ ಮಾಹಿತಿ ಮೇರೆಗೆ ತಯಾರಿಸಲಾಗಿರುತ್ತದೆ. ಪ್ರಮಾಣ ಪತ್ರವನ್ನು ನನಗೆ ಓದಿ ಹೇಳಲಾಗಿದ್ದು , ಅದನ್ನು ತಿಳಿದುಕೊಂಡು ಸಹಿ ಮಾಡಿರುತ್ತೇನೆ. ನಾನು ಕೆಲವೊಂದು ದಾಖಲೆಗಳನ್ನು ನ್ಯಾಯಾಲಯದ ಮುಂದೆ ಈ ದಿನ ಹಾಜರು ಮಾಡುತ್ತಿದ್ದೇನೆ. ಅವುಗಳನ್ನು ನನ್ನ ಪರವಾಗಿ ನಿಶಾನೆಯಾಗಿ ಗುರತಿಸಬೇಕಾಗಿ ಪ್ರಾರ್ಥನೆ .

ವಾದಿಯ ದಾಖಲೆಗಳನ್ನು ಈ ಕೆಳಕಂಡತೆ ನಿಶಾನೆಗಳಾಗಿ ಗುರುತಿಸಲಾಯಿತು.

| | |
|---|---|
| ನಿಪಿಃ 1 | ದಿಃ 21-05-1988 ರಂದು ಆದ ಮೂಲ ಖರೀದಿ ಪತ್ರ |
| ನಿಪಿಃ 2 | ಹುಲ್ಲೂರು ಗ್ರಾಮದ ಸರ್ವೆ ನಂಬರ 467/1+2+3 ಎ/2 ಇದರ ಆರ್.ಟಿ.ಸಿ. ಎಕ್ಸ್ ಟ್ರ್ಯಾಕ್ಟ |
| ನಿಪಿಃ 3 | ಮುದೇನಗುಡಿ ಗ್ರಾಮದ ಸರ್ವೆ ನಂಬರ 2/1 ಇದರ ಆರ್.ಟಿ.ಸಿ. ಎಕ್ಸ್ ಟ್ರ್ಯಾಕ್ಟ |
| ನಿಪಿಃ 4 | ಮುದೇನಗುಡಿ ಗ್ರಾಮದ ಸರ್ವೆ ನಂಬರ 2/2 ಇದರ ಆರ್.ಟಿ.ಸಿ. ಎಕ್ಸ್ ಟ್ರ್ಯಾಕ್ಟ |
| ನಿಪಿಃ 5 | ಮುದೇನಗುಡಿ ಗ್ರಾಮದ ಸರ್ವೆ ನಂಬರ 2/3 ಇದರ ಆರ್.ಟಿ.ಸಿ. ಎಕ್ಸ್ ಟ್ರ್ಯಾಕ್ಟ |
| ನಿಪಿಃ 6 | ಹುಲ್ಲೂರು ಗ್ರಾಮದ ಸರ್ವೆ ನಂಬರ 490 ಇದರ ಆರ್.ಟಿ.ಸಿ. ಎಕ್ಸ್ ಟ್ರ್ಯಾಕ್ಟ |

ವಾದಿಯ ದಾವೆಯನ್ನು ಡಿಕ್ರಿ ಮಾಡಬೇಕೆಂದು ಮಾನ್ಯ ನ್ಯಾಯಾಲಯಕ್ಕೆ ಕೇಳಿಕೊಳ್ಳುತ್ತೇನೆ.

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರು ಸಮಯ ಕೋರಿದ್ದರಿಂದ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಅದೆ.

**(ಆದಿತ್ಯ ಆರ್ ಕಲಾಲ್ )**
**ಹೆಚ್ಚುವರಿ ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ**
**ನ್ಯಾಯಾಧೀಶರು ರೋಣ.**